# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ಗ್ರಾಮಗಳ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾಮಾಂತರ) ಇವರ ಪತ್ರ ಸಂಖ್ಯೆ: ಬೆಂಗ್ರಾಜಿಪಂ/ ಅಭಿ/ ಸುಗ್ರಾಯೋ(5) ಸಿಆರ್/72/2012-13 ದಿ:06.09.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ 4 ತಾಲ್ಲೂಕುಗಳ 52 ಗ್ರಾಮಗಳನ್ನು ಆಯ್ಕೆ ಮಾಡಿ ಶಾಸಕರಿಂದ ಶಿಫಾರಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ **ಬೆಂಗಳೂರು (ಗ್ರಾಮಾಂತರ) ಅವರು** ಓದಲಾಗಿದೆ (3) ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ 52 ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:69:ಸುಗ್ರಾಯೋ:2012. ಬೆಂಗಳೂರು, ದಿನಾಂಕ:22.09.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ 4 ತಾಲ್ಲೂಕುಗಳ 52 ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾಮಾಂತರ)
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬೆಂಗಳೂರು (ಗ್ರಾಮಾಂತರ)
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾಮಾಂತರ)
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ಹೆಚ್ಚುವರಿ.

# ಅನುಬಂಧ

ಬೆಂಗಳೂರು(ಗ್ರಾಮಾಂತರ)ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:69:ಸುಗ್ರಾಯೋ:2012, ದಿನಾಂಕ:22.09.2012

ಜಿಲ್ಲೆ: ಬೆಂಗಳೂರು (ಗ್ರಾಮಾಂತರ)

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ದೇವನಹಳ್ಳಿ | 1 | ಬೈಚಾಪುರ | 1312 | 32.80 |
| | | 2 | ಆವತಿ | 2500 | 62,50 |
| | | 3 | ಜಾಲಿಗೆ | 1174 | 29.35 |
| | | 4 | ಬಾಲೇಪುರ | 899 | 22.48 |
| | | 5 | ಬೂದಿಗೆರೆ | 4053 | 101.33 |
| | | 6 | ಗೊಡ್ಲು ಮುದ್ದೇನಹಳ್ಳಿ | 933 | 23.33 |
| | | 7 | ಕೊಮ್ಮಸಂದ್ರ | 802 | 20.05 |
| | | 8 | ರಾಮನಾಥಪುರ/ರಬ್ಬನಹಳ್ಳಿ | 1000 | 25.00 |
| | | 9 | ಮೇಳೆಕೋಟೆ | 1500 | 37.50 |
| | | 10 | ಲಕ್ಷ್ಮೀದೇವಿಪುರ | 987 | 24.68 |
| | | | ಒಟ್ಟು | **15160** | **379.00** |
| 2 | ಹೊಸಕೋಟೆ | 1 | ಬೈಲನರಸಾಪುರ | 3763 | 94.08 |
| | | 2 | ನಂದಗುಡಿ | 3085 | 77.13 |
| | | 3 | ಬೇಗೂರು | 1239 | 30.98 |
| | | 4 | ಕಮ್ಮಸಂದ್ರ | 1301 | 32.53 |
| | | 5 | ಆಲಪ್ಪನಹಳ್ಳಿ | 1032 | 25.80 |
| | | 6 | ಕುಂಬಳಹಳ್ಳಿ | 2873 | 71.83 |
| | | 7 | ಮಲ್ಲಸಂದ್ರ | 2084 | 52.10 |
| | | 8 | ದೊಡ್ಡನಲ್ಲಾಳ | 806 | 20.15 |
| | | 9 | ದೊಡ್ಡದುನ್ನಸಂದ್ರ | 1598 | 39.95 |
| | | 10 | ಸಮೇತನಹಳ್ಳಿ | 1221 | 30.53 |
| | | 11 | ಖಾಜಿ ಹೊಸಹಳ್ಳಿ | 957 | 23.93 |
| | | 12 | ದೊಡ್ಡದೇನಹಳ್ಳಿ | 630 | 15.75 |
| | | 13 | ತಿರುವರಂಗ | 731 | 18.28 |
| | | | ಒಟ್ಟು | **21320** | **533.00** |

| | | | | | |
|---|---|---|---|---|---|
| | | 1 | ಸೋಂಪುರ | 2908 | 72.70 |
| | | 2 | ನರಸೀಪುರ | 758 | 18.95 |
| | | 3 | ಮರಳಕುಂಟೆ | 1334 | 33.35 |
| | | 4 | ಬಸವನಹಳ್ಳಿ | 3417 | 85.43 |
| | | 5 | ಯಂಟಗಾನಹಳ್ಳಿ | 858 | 21.45 |
| | | 6 | ಅಂಚೀಪುರ | 958 | 23.95 |
| 3 | ನೆಲಮಂಗಲ | 7 | ಕೊಡಿಗೆಹಳ್ಳಿ | 957 | 23.93 |
| | | 8 | ಗೋರಘಟ್ಟ | 939 | 23.48 |
| | | 9 | ಗೋವೆನಹಳ್ಳಿ | 897 | 22.43 |
| | | 10 | ತೋಟನಹಳ್ಳಿ | 442 | 11.05 |
| | | 11 | ದೊಡ್ಡೇರಿ | 807 | 20.18 |
| | | 12 | ಕುಲುವನಹಳ್ಳಿ | 908 | 22.70 |
| | | 13 | ಇಸುವನಹಳ್ಳಿ | 1219 | 30.48 |
| | | 14 | ಬೈರನಾಯ್ಕನಹಳ್ಳಿ | 758 | 18.95 |
| | | | **ಒಟ್ಟು** | **17160** | **429.00** |
| | | 1 | ಬನವತಿ | 2204 | 55.10 |
| | | 2 | ಕಾಡತಿಪ್ಪೂರು | 1209 | 30.23 |
| | | 3 | ಕನಸವಾಡಿ | 1593 | 39.83 |
| | | 4 | ಕಾಡನೂರು | 1406 | 35.15 |
| | | 5 | ಮಲ್ಲೊಹಳ್ಳಿ | 878 | 21.95 |
| | | 6 | ಚಿಕ್ಕಹೆಜ್ಜಾಜಿ | 1749 | 43.73 |
| | | 7 | ಸೊಣ್ಣೇನಹಳ್ಳಿ | 860 | 21.50 |
| 4 | ದೊಡ್ಡಬಳ್ಳಾಪುರ | 8 | ಕತ್ತಿಹೊಸಹಳ್ಳಿ | 968 | 24.20 |
| | | 9 | ಅಂತರಹಳ್ಳಿ, ಅಳ್ಳಾಳಸಂದ್ರ | 1147 | 28.68 |
| | | 10 | ಮಲ್ಲತಹಳ್ಳಿ | 970 | 24.25 |
| | | 11 | ಕೋಳೂರು | 989 | 24.73 |
| | | 12 | ಕೊಡಿಗೇನಹಳ್ಳಿ | 1373 | 34.33 |
| | | 13 | ಬಾಶೆಟ್ಟಿಹಳ್ಳಿ | 4043 | 101.08 |
| | | 14 | ಕರೇನಹಳ್ಳಿ | 1718 | 42.95 |
| | | 15 | ಗುಂಜೂರು | 733 | 18.33 |
| | | | **ಒಟ್ಟು** | **21840** | **546.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **75480** | **1887.00** |

(ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ